ಬೇರೆ ಇದೆ. ತಾಲ್ಲೂಕು ಪಂಚಾಯಿತಿಗೆ ಬೇರೆ ಇದೆ. ಗ್ರಾಮ ಪಂಚಾಯಿತಿಗೆ ಬೇರೆ ಇದೆ. ಇದು ಒಂದು ಪಾಲಿಸಿ ಮ್ಯಾಟರ್ ಆಗುತ್ತದೆ. ಸರ್ಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ವಹಿಸಿಕೊಟ್ಟರೆ ಆಗ ಅವರು ಮಾಡತಕ್ಕಂಥ ಕೆಲಸವನ್ನು ಅವರು ಮಾಡುತ್ತಾರೆ. ಆದರೆ ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅಂದರೆ ಈ ರಸ್ತೆ ಸರಿಯಾಗಿಲ್ಲ ಇದು ಆಗಬೇಕೆನ್ನತಕ್ಕಂಥಾದ್ದು, ಮಾನ್ಯ ಸದಸ್ಯರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯನ್ನು ಅತಿ ಶೀಘ್ರವಾಗಿ ಸರ್ಕಾರ ಮಾಡಿಕೊಡುತ್ತದೆ.

ಕರ್ನಾಟಕ ರಾಜ್ಯದ ಲಲಿತಕಲೆಗಳಿಗೆ ಸಹಾಯಧನ

218 (2316) ಶ್ರೀ ಆರ್.ಅಶೋಕ್ (ಉತ್ತರ ಹಳ್ಳಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕನ್ನಡ ಕಲೆ, ಕನ್ನಡ ನಾಟಕಗಳು, ಯಕ್ಷಗಾನ ಮುಂತಾದ ಕನ್ನಡ ಚಟುವಟಿಕೆಗಳಿಗೆ ಇಲಾಖೆಯವರ ಮಾಸಾಶನ, ಗೌರವಧನ ಹಾಗೂ ಸಹಾಯಧನ ನೀಡಲಾಗುತ್ತಿದೆಯೆ;

ಆ) ಹಾಗಿದ್ದರೆ, ಈ ಪ್ರಸಕ್ತ ಸಾಲಿನಲ್ಲಿ ನೀಡುತ್ತಿರುವ ಗೌರವಧನ, ಸಹಾಯಧನದ ಮೊತ್ತವೆಷ್ಟು;

ಇ) ಕನ್ನಡ ನಾಡು ನುಡಿಗೆ ಶ್ರಮಿಸಿ ಹೋರಾಡಿ ಕೀರ್ತಿ ತಂದುಕೊಟ್ಟಂತಹ ಮಹನೀಯರಿಗೆ, ಕಲಾವಿದರಿಗೆ ಕಾಲಕಾಲಕ್ಕೆ ಸಹಾಯಧನ, ಗೌರವಧನ ಸಿಗುತ್ತಿದೆಯೆ;

ಈ) ಹಾಗಿದ್ದಲ್ಲಿ ಇದುವರೆವಿಗೂ ಎಷ್ಟು ಕಲಾವಿದರಿಗೆ ನೀಡಲಾಗಿದೆ; ಅದರ ಮೊತ್ತವೆಷ್ಟು; ಇನ್ನೂ ಎಷ್ಟು ಕಲಾವಿದರಿಗೆ ಮಾಸಾಶನ ನೀಡಲು ಬಾಕಿ ಇದೆ; ವಿವರ ನೀಡುವುದು;

ಶ್ರೀಮತಿ ರಾಣಿಸತೀಶ್ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು:

ಅ) ಹೌದು

ಆ) 1. ಗೌರವಧನ - ರೂ.60,48,000-00

2. ಸಹಾಯಧನ - ರೂ.2,03,26,017-00

ಇ) ಹೌದು

ಈ) 1. 7554 ಜನರಿಗೆ ಮಾಸಾಶನ ನೀಡಿದೆ

2. ವಾರ್ಷಿಕ ವೆಚ್ಚ ಮೊತ್ತ ರೂ.26,62,000

3. 577 ಜನರಿಗೆ ಬಾಕಿ ಇದೆ.

ಶ್ರೀ ಆರ್.ಅಶೋಕ್: ನನ್ನ ಪ್ರಶ್ನೆಗೆ ಉತ್ತರವಾಗಿ 577 ಜನ ಬಾಕಿ ಇದ್ದಾರೆಂದು ತಿಳಿಸಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ ಇದಕ್ಕಿಂತ ಜಾಸ್ತಿ ಅರ್ಜಿಗಳು ಬಾಕಿ ಇವೆ. ಈಗ ಗೌರವಧನ ಏನು ಕೊಡುತ್ತಿದ್ದಾರೆ ಇದು ಬಹಳ ಕಡಿಮೆ. ಕರ್ನಾಟಕ ರಾಜ್ಯದ ಜನಸಂಖ್ಯೆ ಮತ್ತು ಕಲಾವಿದರಿಗೆ ಹೋಲಿಕೆ ಮಾಡಿದಾಗ ಈಗ ಬಿಡುಗಡೆ ಮಾಡುತ್ತಿರುವ ಹಣ ಬಹಳ ಕಡಿಮೆ. ಈಗ ಹಾಲಿ ಬಾಕಿ ಇರುವ 577 ಅರ್ಜಿಗಳು ಎಷ್ಟು ವರ್ಷಗಳಿಂದ ಬಾಕಿ ಇವೆ?

ಶ್ರೀಮತಿ ರಾಣಿ ಸತೀಶ್: ಸಾಂಸ್ಕೃತಿಕ ಕ್ಷೇತ್ರ ಗಣನೀಯವಾಗಿ ಸೇವೆ ಸಲ್ಲಿಸಿರತಕ್ಕಂಥವರಿಗೆ, ಮಾಸಾಶನ ನೀಡತಕ್ಕಂಥಾದ್ದು ಏನಿದೆ ಈ ಬಗ್ಗೆ ಸುಮಾರು 577 ಅರ್ಜಿಗಳು ಬಾಕಿ ಇವೆ ಅಂತ ಉತ್ತರ ಕೊಟ್ಟಿದ್ದೇನೆ. ಇದು ನಿರಂತರವಾಗಿ ನಡೆಯುವಂತಹ ಒಂದು ಕೆಲಸ. ಈ ಅರ್ಜಿಗಳ ಆಯ್ಕೆಯನ್ನು ಆಯ್ಕೆ ಸಮಿತಿ ಮೂಲಕ ಮಾಡಲಾಗುವುದು. ಈ ಸಮಿತಿಗೆ ಬಂದಂತಹ ಅರ್ಜಿಗಳನ್ನು ಆ ಸಮಿತಿಯವರು ಪರಿಗಣಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಹಿನ್ನೆಲೆಯಲ್ಲಿ 577 ಅರ್ಜಿಗಳು ಬಾಕಿ ಇವೆ. ಈ ಅರ್ಜಿಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡುತ್ತೇವೆ. ಪ್ರಸಕ್ತ ಸಾಲಿನಲ್ಲಿ ಒಂದು ಕೋಟಿ 25ಲಕ್ಷ ಗೌರವಧನ ಮಾಸಾಶನ ರೂಪದಲ್ಲಿ ಕೊಡತಕ್ಕಂಥ ಹಿನ್ನೆಲೆ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಮಾಸಾಶನವನ್ನು ಜಾಸ್ತಿ ಮಾಡತಕ್ಕಂಥಾದ್ದು. ಈ ಹಿಂದೆ ಮಾಸಾಶನ 50 ರೂಪಾಯಿಗಳು ಇತ್ತು. ಆಮೇಲೆ ಅದು 100 ರೂಪಾಯಿಗಳಾಯಿತು. ಈಗ 1995ನೇ ಸಾಲಿನಲ್ಲಿ 250 ರೂಪಾಯಿಗಳಾಗಿದೆ. ಇದನ್ನು 500 ರೂಪಾಯಿಗಳಿಗೆ ಹೆಚ್ಚು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದು, ಅದನ್ನು ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ಕೆ.ಪ್ರಭಾಕರ ಬಂಗೇರ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಜಾನಪದ ಕ್ರೀಡೆಯಾಗಿರುವಂತಹ ಕಂಬಳ ಅದನ್ನು ನಡೆಸುವವರಿಗೂ ಕೂಡ ಮಾಸಾಶನ ಕೊಡಬೇಕೆನ್ನುವ ಒಂದು ಬೇಡಿಕೆ ಇದೆ. ಮಾನ್ಯ ಮಂತ್ರಿಗಳಾದ ಶ್ರೀ ರಮಾನಾಥ ರೈ ಅವರು ಕಂಬಳಕ್ಕೆ ಮಾಸಾಶನವನ್ನು ಕೊಡುವಂತಹ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದರೆ ಅವರಿಗೆ ಎಷ್ಟು ಮಾಸಾಶನವನ್ನು ಕೊಡಲಾಗುವುದು? ಈ ವಿಷಯದಲ್ಲಿ ಎಷ್ಟು ಅರ್ಜಿಗಳು ಸರ್ಕಾರಕ್ಕೆ ಬಂದಿವೆ ಎನ್ನುವ ಮಾಹಿತಿಯನ್ನು ನಾನು ಕೇಳುತ್ತೇನೆ.

ಶ್ರೀ ಕೆ.ಎಚ್.ರಂಗನಾಥ್: ಕಂಬಳದಲ್ಲಿ ಭಾಗವಹಿಸುವಂತಹವರು ಇಬ್ಬರು, ಒಂದು ಕೋಣ ಮತ್ತು ಕೋಣವನ್ನು ಓಡಿಸುವಂತಹವರು. ಇದರಲ್ಲಿ ಯಾರಿಗೆ ಮಾಸಾಶನ ಬರಬೇಕು?

ಶ್ರೀ ಕೆ.ಪ್ರಭಾಕರ ಬಂಗೇರ: ಕೋಣ ಓಡಿಸುವವರಿಗೆ ಕೊಡಬೇಕು.

ಶ್ರೀಮತಿ ರಾಣಿ ಸತೀಶ್: ಕೋಣಗಳಿಂದ ಸರ್ಕಾರಕ್ಕೆ ಯಾವುದೇ ಅರ್ಜಿ ಬಂದಿಲ್ಲ.

ಶ್ರೀ ರಮಾನಾಥ ರೈ: ಈಗಾಗಲೇ ಪ್ರವಾಸೋದ್ಯಮ ಇಲಾಖೆ ಮತ್ತು ನಮ್ಮ ಯುವಜನ ಸೇವಾ ಇಲಾಖೆ ಇದನ್ನು ಪರಿಗಣಿಸಿ ಒಂದು ಮೊತ್ತವನ್ನು ಇಟ್ಟಿದೆ. ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ ಆಗಬೇಕು.

ಶ್ರೀ ವಿಶ್ವೇಶ್ವರ ಹೆಗಡೆ: ಸುಮಾರು 7754 ಜನರಿಗೆ ಸರ್ಕಾರ ಮಾಸಾಶನ ನೀಡುತ್ತಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಅರ್ಜಿಗಳು ಬಾಕಿ ಇರುವುದು 577. ಕನ್ನಡ ಕಲೆ, ಸಾಹಿತ್ಯ, ನಾಟಕ, ಯಕ್ಷಗಾನ ಇತ್ಯಾದಿ ಬೇರೆ ಬೇರೆ ಕ್ಷೇತ್ರದಲ್ಲಿ ಯಾರು ಸೇವೆ ಸಲ್ಲಿಸಿರುತ್ತಾರೋ ಅವರಿಗೆ ಗೌರವಧನ ಕೊಡಬೇಕು. ಆ ತರಹದ ಅರ್ಜಿಗಳು ಇಷ್ಟು ಬಾಕಿ ಇವೆ ಎಂದು ಹೇಳಿದ್ದಾರೆ. ಆದರೆ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಅವರು ಅನೇಕ ಸಂದರ್ಭದಲ್ಲಿ ಮನವಿಗಳನ್ನು ಸಲ್ಲಿಸಿದ್ದಾರೆ. ಅವರಿಗೆ ಗೌರವಧನ ಹೆಚ್ಚು ಮಾಡಬೇಕೆನ್ನುವುದರ ಜೊತೆಗೆ ಹೊಸದಾಗಿ ಅರ್ಜಿಗಳನ್ನು

ತೆಗೆದುಕೊಳ್ಳಬೇಕೆಂದು, ಈಗ ಹೊಸ ಅರ್ಜಿಗಳನ್ನು ತೆಗೆದುಕೊಳ್ಳುತ್ತಿಲ್ಲ. ಹಳೆಯ ಅರ್ಜಿಗಳು ಇನ್ನೂ ಇಷ್ಟು ಬಾಕಿ ಇದೆ. 1986ನೇ ಇಸವಿಯಲ್ಲಿ ಬಂದ ಅರ್ಜಿಗಳೇ ಇನ್ನೂ ಬಾಕಿ ಇವೆ ಎನ್ನುವ ಸುದ್ದಿ ನನಗೆ ಇದೆ. ಹೀಗಿರುವಾಗ ಸರ್ಕಾರ ಹೊಸ ಅರ್ಜಿಗಳನ್ನು ಯಾವಾಗ ತೆಗೆದುಕೊಳ್ಳಲು ಪ್ರಾರಂಭಿಸುತ್ತಾರೆ? ಈಗ ಬಾಕಿ ಇರುವ ಅರ್ಜಿಗಳನ್ನು ಯಾವಾಗ ಪೂರೈಸುತ್ತಾರೆ?

ಶ್ರೀಮತಿ ರಾಣಿ ಸತೀಶ್: ಹೊಸ ಅರ್ಜಿಗಳನ್ನು ನಿರಂತರವಾಗಿ ತೆಗೆದುಕೊಳ್ಳಲಾಗುತ್ತಿದೆ, ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ ಎಂದು ಎಲ್ಲೂ ಹೇಳಿಲ್ಲ. ಸಮಿತಿಯಿಂದ ಮಾನ್ಯತೆ ಪಡೆದಂತಹ ಅರ್ಜಿಗಳ ಸಂಖ್ಯೆ 577 ಅಂತ ಕೊಟ್ಟಿದ್ದೇವೆ. ನಾವು ಬರುವಂತಹ ಅರ್ಜಿಗಳನ್ನು ನಿರಂತರವಾಗಿ ತೆಗೆದುಕೊಳ್ಳುತ್ತಿದ್ದೇವೆ. ಇದರಲ್ಲಿ ಅರ್ಜಿಗಳನ್ನು ತೆಗೆದುಕೊಳ್ಳುತ್ತಿಲ್ಲ. ಎನ್ನುವ ಪ್ರಶ್ನೆ ಉದ್ಭವವಾಗುವುದಿಲ್ಲ. ತಾವು ಸಂಘ ಸಂಸ್ಥೆಗಳ ಬಗ್ಗೆ ಪ್ರಸ್ತಾಪ ಮಾಡಿದಿರಿ. ನಾವು 1999-2000ನೇ ಸಾಲಿನಲ್ಲಿ ಸುಮಾರು 10 ಸಂಸ್ಥೆಗಳಿಗೆ ಹಣ ಕೊಟ್ಟಿದ್ದೇವೆ. ಸುಮಾರು 2.40 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಿದ್ದೇವೆ. ಅರ್ಜಿಗಳನ್ನು ನಾವು ಈಗಲೂ ಸ್ವೀಕಾರ ಮಾಡುತ್ತೇವೆ.

ಶ್ರೀ ವಸಂತ ವಿ.ಸಾಲಿಯಾನ: ಕಂಬಳದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಅರ್ಜಿಗಳು ಬಂದಿಲ್ಲ ಎನ್ನುವ ವಿಚಾರ ಹೇಳಿದರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಹಾಗೂ ದಿವಂಗತ ಮಾನ್ಯ ಗುಂಡೂರಾವ್ ಅವರ ಕಾಲದಿಂದಲೂ ಸಹ ನಾವು ಈ ಬಗ್ಗೆ ಚರ್ಚೆ ಮಾಡುತ್ತಾ ಬಂದಿದ್ದೇವೆ. ನಾನು 1983ನೇ ಇಸವಿಯಿಂದ ಕೇಳುತ್ತಾ ಬಂದಿದ್ದೇನೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇದು ರೈತರಿಗೆ ಒಂದು ವರ್ಷಕ್ಕೆ ಒಂದು ಸಲ ಮಾಡುವಂತಹ ದೊಡ್ಡ ಜಾತ್ರೆ. ಕೋಣವನ್ನು ಯಾರು ಸಾಕಿರುತ್ತಾರೆ, ಮತ್ತು ಕೋಣವನ್ನು ಯಾರು ಓಡಿಸುತ್ತಾರೆ ಅವರಿಗೆ ಊರಿನವರೆಲ್ಲಾ ಸೇರಿಕೊಂಡು ಒಂದು ಬಹುಮಾನವನ್ನು ಕೊಡುತ್ತಾರೆ. ನಾವು 1980ನೇ ಇಸವಿಯಿಂದ ಈ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ, ಆದರೆ ಇದುವರೆಗೂ ಯಾವುದೇ ಸರ್ಕಾರ ಈ ಬಗ್ಗೆ ಚಿಂತನೆ ಮಾಡಿಲ್ಲ. ಲಕ್ಷಾಂತರ ಜನಗಳು ಸೇರಿಕೊಂಡು ಮಾಡುವ ಈ ದೊಡ್ಡ ಜಾತ್ರೆಗೆ ಹಾಗೂ ಎಲ್ಲೆಲ್ಲಿ ಇಂಥ ಕಂಬಳಗಳು ನಡೆಯುತ್ತಿವೆ ಅವುಗಳಿಗೆ ಬೇಕಾಗಿರುವ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾಸಾಶನವನ್ನು ಯಾರಿಗೆ ಕೊಡಬೇಕು ಎನ್ನುವ ಸಂದರ್ಭದಲ್ಲಿ ಇಲ್ಲಿ ಯಾರೋ ಹೇಳಿದ ಹಾಗೆ ಆ ಮಾಸಾಶನವನ್ನು ಕೋಣಕ್ಕೆ ಕೊಡಬೇಕು ಎಂದು ಹೇಳಿದರು. ಆದ್ದರಿಂದ ಆ ಕೋಣಗಳಿಂದ ಅರ್ಜಿ ಬಂದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಬೇಕಾಯಿತು. ಜನರಿಂದ ಅರ್ಜಿಗಳು ಬಂದಿವೆ, ಆದರೆ ಕಂಬಳ ಎನ್ನುವುದು ಕ್ರೀಡೆಯಾಗಿರುವುದರಿಂದ ಇದು ಕ್ರೀಡಾ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇದು ನಮ್ಮ ಇಲಾಖೆಗೆ ಬರುವುದಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ಕ್ರೀಡಾ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಸೇರಿಕೊಂಡು ಇದಕ್ಕೆ ಏನಾದರೊಂದು ಕಾರ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಏಕೆಂದರೆ, ಪ್ರತಿ ವರ್ಷ ಈ ಕಂಬಳ ನಡೆಯುತ್ತಿರುವ ಸಂದರ್ಭದಲ್ಲಿ ಯಾವುದೇ ಸರ್ಕಾರ

ಇದ್ದರೂ ಕೂಡ ಮಂತ್ರಿಗಳು ಇದರಲ್ಲಿ ಭಾಗವಹಿಸಿ ನಾವು ಇದಕ್ಕೆ ಎಲ್ಲಾ ರೀತಿಯ ಪ್ರೋತ್ಸಾಹ ಕೊಡುತ್ತೇವೆಂದು ಭರವಸೆ ನೀಡುತ್ತಾರೆ. ಆದ್ದರಿಂದ, ಸುಮಾರು ಇಪ್ಪತ್ತು ವರ್ಷಗಳಿಂದಲೂ ಇದರ ಬಗ್ಗೆ ಯಾವುದೇ ಸರ್ಕಾರ ಚಿಂತನೆ ಮಾಡಿಲ್ಲ.

ಅಧ್ಯಕ್ಷರು: ಸಮಾಲೋಚನೆ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ: ಈ ಪ್ರಶ್ನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೇಳಿದರೆ ಹೇಗೆ? ಇದನ್ನು ಬೇರೆ ಕಳುಹಿಸಿದರೆ ಮಾಡಬಹುದು.

ಶ್ರೀ ಎನ್.ಯೋಗೀಶ್ ಭಟ್: ಕಲಾವಿದರು ವಿಶೇಷವಾಗಿ ಬಡವರಾಗಿರುವುದರಿಂದ ಇವರ ಮಕ್ಕಳಿಗೆ ಸರ್ಕಾರಿ ಉದ್ಯೋಗದಲ್ಲಿ ಆದ್ಯತೆ ಕೊಡುವುದರ ಬಗ್ಗೆ, ಮೀಸಲಾತಿ ಕೊಡುವುದರ ಬಗ್ಗೆ ಚಿಂತನೆ ಇದೆಯೇ?

ಅಧ್ಯಕ್ಷರು: ಕಲಾವಿದರಿಗೇ ಇಲ್ಲದಿರುವುದರಿಂದ, ಅವರ ಮಕ್ಕಳಿಗೆ ಎನ್ನುವ ಪ್ರಶ್ನೆ ಬರುವುದಿಲ್ಲ.

ಶ್ರೀಮತಿ ರಾಣಿ ಸತೀಶ್: ಕಲಾವಿದರು ತೀರಿಕೊಂಡ ನಂತರ ಅವರ ಮಕ್ಕಳಿಗೆ ಮೀಸಲಾತಿ ಕೊಡಬೇಕು ಎನ್ನುವುದು ಇಲ್ಲ. ಆದರೆ, ಅವರ ಕುಟುಂಬದವರಿಗೆ ಮಾಸಾಶನ ಕೊಡತಕ್ಕಂಥದ್ದು ಇದೆ.

ಶ್ರೀ ಎನ್.ಪಿ.ಮುದ್ದಹನುಮೇಗೌಡ: ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಲೆ, ಪೌರಾಣಿಕ ನಾಟಕ, ಇಂಥ ಕಲೆಗಳು ಕ್ರಮೇಣವಾಗಿ ಕ್ಷೀಣಿಸುತ್ತಿದೆ, ನಶಿಸಿಹೋಗುತ್ತಿದೆ ಎನ್ನತಕ್ಕಂಥ ಸತ್ಯವನ್ನು ನಾವೆಲ್ಲರೂ ಒಪ್ಪಲೇಬೇಕಾಗುತ್ತದೆ. ಇವುಗಳಿಗೆ ಸರಿಯಾದ ರೀತಿಯ ಪ್ರೋತ್ಸಾಹ ಸಿಗದಿರುವುದರಿದ ಈ ರೀತಿ ಆಗುತ್ತಿದೆ. ಆರ್ಥಿಕ ಹಿನ್ನೆಲೆಯಲ್ಲಿ ಇಂಥ ಕಲೆಗಳು ನಶಿಸಿ ಹೋಗುತ್ತವೆ ಎನ್ನುವ ಅಂಶ ಮಾನ್ಯ ಸಚಿವರ ಗಮನಕ್ಕೆ ಕೂಡ ಬಂದಿದೆ. ಈ ಸಮಯದಲ್ಲಿ ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ, ಪುರಾತನ ಕಾಲದಿಂದಲೂ ಹುಟ್ಟಿಕೊಂಡು ಬಂದಿರತಕ್ಕಂಥ ಕಲೆ, ಪೌರಾಣಿಕ ನಾಟಕ ಇವುಗಳನ್ನು ಇವತ್ತು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಲಾವಿದರು ಉಳಿಸಿ, ಬೆಳೆಸಿಕೊಂಡು ಬಂದಿರುತ್ತಾರೆ. ಇದಕ್ಕೆ ಸಹಾಯ ಮಾಡುವ ಉದ್ದೇಶದಿಂದ "ರಂಗ ಸುಗ್ಗಿ" ಎನ್ನುವ ಒಂದು ಯೋಜನೆಯನ್ನು ತಂದಿದ್ದಾರೆ. ಆದರೆ, ಅನೇಕ ನಾಟಕಗಳಿಗೆ ಇವತ್ತು ಪ್ರೋತ್ಸಾಹ ಕೊಡುತ್ತಿಲ್ಲ, ವರ್ಷಕ್ಕೆ ಎಲ್ಲೋ ಒಂದು, ಎರಡು ನಾಟಕಗಳಿಗೆ ಪ್ರೋತ್ಸಾಹ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಇದಕ್ಕಾಗಿ ಹೆಚ್ಚಿಗೆ ಅನುದಾನ ಪಡೆದುಕೊಂಡು ಈ ಕಲೆಗಳಿಗೆ ಹೆಚ್ಚಿನ ಹಣವನ್ನು ನೀಡಿದರೆ ಮಾತ್ರ ಇಂಥ ಕಲೆಗಳು ಉಳಿದುಕೊಳ್ಳುತ್ತವೆ. ಇದರ ಜೊತೆಗೆ ಬೆಂಗಳೂರಿನಲ್ಲಿ ಓಡಾಡತಕ್ಕಂಥವರಿಗೆ, ಇತರರಿಗೆ ಮಾಸಾಶನ, ಗೌರವಧನ, ಪ್ರಶಸ್ತಿ ಸಿಗಬಹುದು. ಆದರೆ ಗ್ರಾಮೀಣ ವಿಭಾಗದಲ್ಲಿ ಪೌರಾಣಿಕ ನಾಟಕಗಳನ್ನು ಕಲಿಸುವ ಶಿಕ್ಷಕರು ಏನು ಇದ್ದಾರೆ ಇವರಿಗೆ ಯಾರಿಗೂ ಕೂಡ ಈ ಮಾಸಾಶನ ಸಿಗುತ್ತಿಲ್ಲ. ಆದ್ದರಿಂದ, ಇಂಥ ಕಲೆಗಳನ್ನು ನಾವು ಇವತ್ತು ಉಳಿಸಿಕೊಳ್ಳಬೇಕೆಂದರೆ, ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಲೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ತಾವು ಏನಾದರೂ ವಿಶೇಷವಾದ ಕಾರ್ಯಕ್ರಮ ರೂಪಿಸಿಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ರಾಣಿ ಸತೀಶ್: ಮಾನ್ಯ ಸದಸ್ಯರು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಲೆಗಳ ಬಗ್ಗೆ ಬಹಳ ಕಾಳಜಿ ವ್ಯಕ್ತಪಡಿಸಿದರು. ಈ ಕಾಳಜಿ ಸರ್ಕಾರಕ್ಕೂ ಕೂಡ ಇದೆ. ಗ್ರಾಮೀಣ ಪ್ರದೇಶದಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೆ ಹಣವನ್ನು ಸಹಾಯ ಮಾಡುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದನ್ನು ಸಂಸ್ಕೃತಿ ನೀತಿಯಲ್ಲಿ ಒಳಪಡಿಸುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸಿ ಕಾರ್ಯರೂಪಕ್ಕೆ ತರತಕ್ಕಂಥ ಪ್ರಯತ್ನವೂ ಇದೆ. ಕಲಾವಿದರಿಗೆ ಮಾಸಾಶನ ಕೊಡುವ ನಿಟ್ಟಿನಲ್ಲಿ ಪೌರಾಣಿಕ ನಾಟಕಗಳ ಕಲಾವಿದರಿಗೂ ಈ ಸೌಲಭ್ಯ ಕೊಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರು ಏನು ಕಾಳಜಿ ವ್ಯಕ್ತ ಮಾಡಿದ್ದಾರೆ, ಈ ಒಂದು ಸಮಿತಿಯಲ್ಲಿ ಬರತಕ್ಕಂಥ ನಡವಳಿಕೆಗಳಲ್ಲಿ ಈ ಅರ್ಜಿಗಳನ್ನು ಪರಿಗಣಿಸಿ, ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ, ಪೌರಾಣಿಕ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರ್ಕಾರ ಖಂಡಿತ ಮಾನ್ಯತೆ ಕೊಡುತ್ತದೆ.

ಮಾಲಿನ್ಯ ನಿಯಂತ್ರಣ ಮಂಡಳಿ ಪರಿವೀಕ್ಷಣೆ ಮಾಡಿದ ಕಾರ್ಖಾನೆಗಳು

224 (1998) ಶ್ರೀ.ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):: ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಪರಿವೀಕ್ಷಣೆ ಮಾಡಿದ ಕಾರ್ಖಾನೆಗಳ ಸಂಖ್ಯೆ ಎಷ್ಟು; (ಪಟ್ಟಿ ಒದಗಿಸಿ)

ಆ) ಮಾಲಿನ್ಯ ಸೂಸುತ್ತಿರುವ ಕಾರ್ಖಾನೆಗಳ ವಿರುದ್ಧ ಮಂಡಳಿಯು ಕೈಗೊಂಡ ಕ್ರಮಗಳೇನು;

ಶ್ರೀ ಕೆ.ಎಚ್.ರಂಗನಾಥ್ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 1998-99ರಲ್ಲಿ ಪರಿವೀಕ್ಷಣೆ ನಡೆಸಲಾದ ಕಾರ್ಖಾನೆಗಳ ವಿವರ ಕೆಳಕಂಡಂತಿವೆ.

ಬೃಹತ್ - 1617

ಮಧ್ಯಮ - 1113

ಸಣ್ಣ - 6445

ಹಾಗೂ 1999-2000ರಲ್ಲಿ ಪರಿವೀಕ್ಷಣೆ ನಡೆಸಲಾದ ಕಾರ್ಖಾನೆಗಳ ವಿವರ ಕೆಳಕಂಡಂತಿದೆ.

ಬೃಹತ್ - 1945

ಮಧ್ಯಮ - 1428

ಸಣ್ಣ - 8605

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕೆಗಳಿಗೆ ಜಲ ಮತ್ತು ವಾಯು ಮಾಲಿನ್ಯಕಾರಕಗಳ ವಿಸರ್ಜನೆಯ ಗುಣಮಟ್ಟವನ್ನು ನಿಗದಿಪಡಿಸಿ ಪರಿಸರ ಮಾಲಿನ್ಯವನ್ನು ತಡೆಗಟ್ಟುತ್ತಿದೆ. ಮಂಡಳಿಯು ವಿಧಿಸಿದ ನಿಬಂಧನೆಗಳನ್ನು ಹಾಗೂ ಗುಣಮಾನಕಗಳನ್ನು ಪಾಲಿಸದೇ